

ಒಂಟೆ ಸವಾರಿ, ಜೀಪ್ ಮತ್ತು ಕ್ವಾಡ್ ಬೈಕಿಂಗ್‌ನಂಥ ಚಟುವಟಿಕೆಗಳಿಗೆ ರೂಪಿಸಿರುವ ಕ್ಯಾಂಪ್‌ಗಳು

ಸುಟ್ಟು ಜನರಿಗೆ ಅವುಗಳ ಚೂರನ್ನು ನೀಡಿದರು. ಬರೇ ಗೋಧಿಹಿಟ್ಟು, ಉಪ್ಪು ಮತ್ತು ನೀರಿನಿಂದ ಮಾಡಿದ ದಿಢೀರ್ ಖಾದ್ಯ ಎಂದು ಬಿಳಿಯ ಜನಾಂಗದ ಜನರಿಗೆ ವಿವರಿಸಿ ಅವರಿಂದ ಒಂದಿಷ್ಟು ಭಕ್ಷೀಸನ್ನು ಕೇಳಿ ಪಡೆದುಕೊಂಡರು.

ಈಜಿಪ್ಟಿನ ಜನರು ಪ್ರತಿಯೊಂದಕ್ಕೂ ಭಕ್ಷೀಸು ಕೇಳುತ್ತಾರೆ. ಪ್ರವಾಸಿಗರಿಗೆ ದುಂಬಾಲು ಬಿದ್ದು, ಅವರನ್ನು ಹೊಗಳಿ, ನಗಿಸಿ, ಸಣ್ಣಪುಟ್ಟ ಕೆಲಸಗಳನ್ನು ಬಲವಂತವಾಗಿ ಮಾಡಲು ಮುಂದಾಗುತ್ತಾರೆ, ಹಿಂದೆಯೇ, ಕೈಮುಂದೆ ಮಾಡುತ್ತಾರೆ. ಇತ್ತೀಚೆಗೆ, ಈಜಿಪ್ಟಿನ ಹಣದ ಬೆಲೆಯಲ್ಲಿ ಭಾರೀ ಕುಸಿತವಾದ ಕಾರಣ, ಅಲ್ಲಿನ ಜನರು ಭಕ್ಷೀಸನ್ನು ಕೇಳುವುದು ಅಮೆರಿಕನ್ ಡಾಲರ್ ಅಥವಾ ಯೂರೋಗಳಲ್ಲಿ.

ಬಿರು ಬಿಸಿಲಿನಲ್ಲಿ ಬೇಯುತ್ತ, ದುಡಿಯುವ ಜನರ ಬಡತನ ಇಡೀ ದೇಶದಲ್ಲಿ ಕಂಡುಬರುತ್ತದೆ. ಸಿಮೆಂಟಿನ ಕವಚವಿಲ್ಲದ ಅರೆಬರೆ ಮುಗಿಸಿದ ಕಟ್ಟಡಗಳಂತೆ ಕಾಣುವ ಇಟ್ಟಿಗೆಯ ಮನೆಗಳಲ್ಲಿ ಬಹಳಷ್ಟು ಜನರು ವಾಸಿಸುತ್ತಿದ್ದಾರೆ. ಆಹಾರಕ್ಕಾಗಿ ಕಡಲಿನ ಮೀನುಗಳು, ಕೋಳಿ ಮತ್ತು ಪಾರಿವಾಳಗಳು ಹೆಚ್ಚು ಬಳಕೆಯಾಗುತ್ತವೆ.

ನಮ್ಮಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಎತ್ತಿನ ಮೇಲೋ, ಎಮ್ಮೆಗಳ ಮೇಲೋ ಕುಳಿತು ಸಾಗುವ ಜನರಂತೆ ಇಲ್ಲಿ ಕತ್ತೆಗಳ ಮೇಲೆ ಕುಳಿತು ಸವಾರಿ ಮಾಡುವ ಜನ ಕಾಣಸಿಗುತ್ತಾರೆ; ಕತ್ತೆಗಳು ಎಳೆಯುವ ಗಾಡಿಗಳು ಸಾಕಷ್ಟು ಕಂಡುಬರುತ್ತವೆ.

ಹುರ್ಗಾಡವೊಂದರಲ್ಲೇ ಎಲ್ಲ ಸ್ತರದ ನೂರಾರು ಹೋಟೆಲುಗಳಿವೆ. ಪಂಚತಾರಾ ಹೋಟೆಲುಗಳ ರಸ್ತೆಯೇ ಇದೆ. ನೂರಾರು ಎಕರೆಗಳಲ್ಲಿ ಹರಡಿಕೊಂಡಿರುವ ಈ ಐಷಾರಾಮಿ ಹೋಟೆಲುಗಳು ಅವುಗಳದ್ದೇ ಲೋಕವೊಂದನ್ನು ಸೃಷ್ಟಿಸುತ್ತವೆ. ಮದ್ಯ, ಮನರಂಜನೆ, ನಾನಾ ಬಗೆಯ ಈಜುಕೊಳಗಳು, ಮಸಾಜು, ವ್ಯಾಯಾಮದಿಂದ ಹಿಡಿದು ಎಲ್ಲ ಬಗೆಯ ಚಟುವಟಿಕೆಗಳು ನಡೆಯುತ್ತವೆ. ಪ್ರತಿ ಹೋಟೆಲಿಗೆ ತಗುಲಿಕೊಂಡಂತೇ ಖಾಸಗಿ ಬೀಚುಗಳಿವೆ.

ಖಾಸಗಿಯಾದ ಕಾರಣ ಸಂಪೂರ್ಣ ಸುರಕ್ಷಿತವಾದ್ದೊಂದು ಭಾವದಲ್ಲಿ ಜನರು ಇಲ್ಲಿ ಸೂರ್ಯನ ಶಾಖಕ್ಕೆ ಮೈಯೊಡ್ಡಿ ಸುಖಿಸುತ್ತಾರೆ. ಮುಂಜಾವಿನ ಎಳೆಬಿಸಿಲಿನಿಂದ ಶುರುಮಾಡಿ, ರಾತ್ರಿಯ ಶೀಷ ಬಾರ್‌ಗಳಲ್ಲಿ ಹೊಗೆ ಕುಡಿಯುವವರೆಗೂ ಬೀಚುಗಳಲ್ಲಿಯೇ ಇರುತ್ತಾರೆ. ಈಜುಕೊಳಗಳ ನಡುವೆಯೇ ಬಾರ್‌ಗಳು ಬೇಕಾದ ಪಾನೀಯಗಳನ್ನು ನೀಡುತ್ತವೆ. ಅಕಸ್ಮಾತ್ ಮುಳುಗಿದರೆ ಎಂದು ಲೈಫ್‌ಗಾರ್ಡ್‌ಗಳು ಅತಿಥಿಗಳ ಮೇಲೆ ಸತತ ಕಣ್ಣಿಟ್ಟಿರುತ್ತಾರೆ. ರಾತ್ರಿಯಾದೊಡೆ ಶೀಷ (ಗುಡಗುಡಿ) ಸೇದುವ ಟೆಂಟುಗಳು ಜನರಿಂದ ತುಂಬಿ ತುಳುಕುತ್ತವೆ.

## ಹಿತಕರ ಹವಾಮಾನ

ಈಜಿಪ್ಟ್ ಬಹು ತಾಪಮಾನ ಹೊಂದಿದ ಜಾಗ. ಆದರೆ ಹುರ್ಗಾಡದಲ್ಲಿ ಮರುಭೂಮಿಯ ಶಾಖದ ರಾಚುವಿಕೆಯಿಲ್ಲ. ಸಮುದ್ರತಟದ ತಂಪು ಗಾಳಿಯಿರುವ ಕಾರಣ ಹವಾಮಾನ ಸಹ್ಯವೆನಿಸುತ್ತದೆ. ಹೆಚ್ಚಿನ ಹಸಿರೂ ಕಂಡುಬರುತ್ತದೆ. ಅಕ್ಟೋಬರ್‌ನಿಂದ ಏಪ್ರಿಲ್‌ವರೆಗೆ ಪ್ರವಾಸಿಗರಿಗೆ ಸೂಕ್ತವೆನ್ನುವ ಉಷ್ಣಾಂಶ ಇಲ್ಲಿರುತ್ತದೆ. ಆ ನಂತರ ಇಲ್ಲಿಯ ತಾಪಮಾನ ಏರತೊಡಗುತ್ತದೆ. ಪ್ರವಾಸಿಗರ ಸಂಖ್ಯೆ ಇಳಿಯತೊಡಗುತ್ತದೆ.

ಹುರ್ಗಾಡ ನಗರದಲ್ಲಿ 400 ಮೀಟರ್ ಎತ್ತರದ ಮಿನಾರ್‌ಗಳಿರುವ ಎಲ್ ಮಿನ ಮಸೀದಿಯಿದೆ. ಕಾಪ್ಟಿಕ್ ಕ್ಯಾಥಿಡ್ರಿಲ್ ಚರ್ಚಿದೆ. 3000 ವಸ್ತುಗಳು ಪ್ರದರ್ಶನಕ್ಕಿರುವ ಮ್ಯೂಸಿಯಂ ಇದೆ. ಈಜಿಪ್ಟಿನ ಅತಿ ದೊಡ್ಡ ಮತ್ತು ಇಡೀ ಆಫ್ರಿಕಾದಲ್ಲಿ ಎರಡನೇ ದೊಡ್ಡದು ಎನ್ನಲಾಗುವ 'ಹುರ್ಗಾಡ ಗ್ರಾಂಡ್ ಅಕ್ವೇರಿಯಂ' ಇಲ್ಲಿದೆ. ಪ್ರಪಂಚದ ಎಲ್ಲ ದುಬಾರಿ ವಸ್ತುಗಳ 'ಉತ್ತಮ ನಕಲಿ'ಗಳು ಮಾರಾಟವಾಗುವ ಬೀದಿಯೂ ಇದೆ. ವಿದೇಶಿ ರುಚಿಯ ಸಾಲು ಸಾಲಾದ ರೆಸ್ಟೋರೆಂಟುಗಳಿರುವ ಬೀದಿಗಳಿವೆ. ಇಲ್ಲಿನ ಗಿಫುನ್ ದ್ವೀಪ ಪ್ರಾಂತ್ಯ ಡೈವಿಂಗ್‌ಗೆ ಪ್ರಸಿದ್ಧವಾದರೆ, ಅಬು ರಮಾದ ಮತ್ತು ಫನಾದಿರ್ ದ್ವೀಪಗಳ ನೀರಿನಲ್ಲಿ ಪುರಾತನ ಮತ್ತು ಅರೆಧ್ವಂಸಗೊಂಡ ಹಡಗುಗಳನ್ನು ನೋಡಲು ಅವಕಾಶವಿದೆ.

ಕೆಂಪು ಸಮುದ್ರದ ನೀರು ಗಾಢ ಹಸಿರು, ನೀಲವರ್ಣದ್ದೇ ಆದರೂ, ಇಲ್ಲಿಯ ನೀರಿನಲ್ಲಿ ಬೆಳೆವ ಸೈಯನೋ ಬ್ಯಾಕ್ಟೀರಿಯಾ (**Trichodesmium Erythraeum**) ನೀರಿಗೆ ಕಂದುಮಿಶ್ರಿತ ಕೆಂಪು ಬಣ್ಣ ನೀಡುತ್ತದೆ. ಹಾಗಾಗಿಯೇ ಕೆಂಪು ಸಮುದ್ರ ಎನ್ನುವ ಹೆಸರು ಹುಟ್ಟಿತು ಎನ್ನಲಾಗಿದೆ. ಸಮುದ್ರದ ನೀರು ಪ್ರಶಾಂತವಾಗಿರುವ ಕಾರಣ, ಬೆಚ್ಚಗಿನ ಈ ನೀರಿನಲ್ಲಿ ಬಣ್ಣಬಣ್ಣದ ಜಲಚರಗಳು ಕಾಣಸಿಗುತ್ತವೆ. ಹವಳದ ದಿಬ್ಬಗಳು ಅಲ್ಲಲ್ಲಿ ಕಾಣಸಿಗುತ್ತವೆ.

## ಹುರ್ಗಾಡದ ಅವಘಡಗಳು

ಈಜಿಪ್ಟಿನ ನೀರು ಶಾಂತವಾಗಿ ಇದ್ದರೂ, ಅಲ್ಲಿನ ರಾಜಕೀಯ ಪ್ರಕ್ಷುಬ್ಧತೆಯಿಂದ ಕೂಡಿರುವಂತಹದ್ದು. ಅಲ್ಲಿ ಹಲವು ಭಯೋತ್ಪಾದಕ ಘಟನೆಗಳಾಗುತ್ತಲೇ ಇರುತ್ತವೆ. 16 ವರ್ಷಗಳ ಹಿಂದೆ ಕೈರೋಗೆ ಹೋದಾಗ ಪ್ರತಿ ಪ್ರವಾಸಿ ಬಸ್ಸುಗಳ ಹಿಂದೆ ಸಶಸ್ತ್ರ ಮಿಲಿಟರಿ ಪಡೆಯಿರುವ ಟ್ರಕ್‌ಗಳು ಹೋದೆಡೆಯಲ್ಲೆಲ್ಲ ಹಿಂಬಾಲಿಸಿಕೊಂಡು ಬಂದಿದ್ದವು. ಪ್ರವಾಸಿಗರಿಗೆ ಈ ರೀತಿ ರಕ್ಷಣೆ ಕೊಡುವುದು ದಶಕಗಳಿಂದ ನಡೆದುಬಂದಿದೆ. ಕೈರೋ ಮತ್ತಿತರ ನಗರಗಳಲ್ಲಿ ಪೊಲೀಸು ಚೌಕಿಗಳಲ್ಲಿ ಗುಂಡು ಹಾರಿಸಲು ತಯಾರಾಗಿರುವ ಕೋವಿಗಳಿರುವುದನ್ನು ಗಮನಿಸಬಹುದು.

ಹುರ್ಗಾಡದಲ್ಲಿ ಹಲವು ಭೀಕರ ಘಟನೆಗಳು ಜರುಗಿವೆ. 1994ರಲ್ಲಿ ಭಯೋತ್ಪಾದಕರು ಇಬ್ಬರು ಈಜಿಪ್ಷಿಯನ್ನರು ಮತ್ತು ಒಬ್ಬ ಜರ್ಮನ್ ಪ್ರವಾಸಿಯನ್ನು ಕೊಂದಿದ್ದರು. 2016ರಲ್ಲಿ ಜಿಹಾದಿಗಳು 3 ಜನ ಪ್ರವಾಸಿಗರ ಮೇಲೆ ಹಲ್ಲೆ ಮಾಡಿದ್ದರು. 2017ರಲ್ಲಿ ಒಬ್ಬ ಭಯೋತ್ಪಾದಕ 7 ಜನ ವಿದೇಶಿ ಮಹಿಳೆಯರನ್ನು ಇರಿದಿದ್ದ. ಇಬ್ಬರು ಜರ್ಮನ್ನರು ಮತ್ತು ಒಬ್ಬ ಜೆಕ್ ರಿಪಬ್ಲಿಕ್ಕಿನ ಮಹಿಳೆ ಆ ದಾಳಿಯಲ್ಲಿ ಮೃತರಾಗಿದ್ದರು. ಅಲ್ಲಿಂದೀಚೆಗೆ ಇಂತಹ ದುರ್ಘಟನೆಗಳು ನಡೆದಿಲ್ಲ.

ಪ್ರವಾಸಿಗರನ್ನೇ ಅವಲಂಬಿಸಿ ಮಿಡಿಯುವ ಹುರ್ಗಾಡದಲ್ಲಿ, ಸ್ಥಳೀಯ ಜನರು ಒಂದಕ್ಕೆ ಹತ್ತು ಪಟ್ಟು ಬೆಲೆ ಹೇಳಿ ಮೋಸ ಮಾಡಬಹುದೇ ಹೊರತು, ಪ್ರವಾಸಿಗರಿಗೆ ತೊಂದರೆ ಕೊಡುವುದಿಲ್ಲ. ಹಾಗಾಗಿ ಸಂಪೂರ್ಣ ಸುರಕ್ಷಿತ ಎಂದು ನಮ್ಮ ಮಾರ್ಗದರ್ಶಿಯೊಬ್ಬ ಹೇಳಿದ. ಅದು ನಿಜ ಎಂಬಂತೆ ಅಲ್ಲಿನ ರಾತ್ರಿಯ ಎಲ್ಲ ಸಮಯದಲ್ಲೂ ಪ್ರವಾಸಿಗರು ಆರಾಮವಾಗಿ ತಿರುಗಾಡಿಕೊಂಡಿದ್ದನ್ನು ನೋಡಿಯೇ ಖುಷಿಯೆನಿಸಿತು.

ಪ್ರತಿಕ್ರಿಯಿಸಿ: feedback@sudha.co.in